ದಿಃ 07.03.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ ಶ್ರೀ ಆರ್ ಚಂದ್ರಶೇಖರ್ ವಕೀಲರವರಿಂದಂಃ**

ಪ್ರಸಕ್ತ ದಾವೆ ಬಿಟ್ಟರೆ ಬೇರೆ ಯಾವುದೇ ಪ್ರಕರಣದ ಈ ನ್ಯಾಯಾಲಯದಲ್ಲಿ ಇಲ್ಲ. ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಒಂದು ಪ್ರಕರಣ ಇದೆ. ದಾವಾ ಸ್ವತ್ತು ನನ್ನ ಹೆಸರಿಗೆ ಬಂದು 10 ವರ್ಷವಾಗಿರುತ್ತದೆ. 2011 ಕ್ಕಿಂತ ಮೊದಲೇ ದಾವಾ ಸ್ವತ್ತು ನನ್ನ ಹೆಸರಿಗೆ ಇತ್ತು ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಅಡಮಾನ ಮಾಡಿದ ವಿಷಯ ಪಹಣಿ ಪತ್ರಿಕೆಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಈಗಲೂ ಅದು ಪಹಣಿಯಲ್ಲಿ ಮುಂದುವರೆದಿದೆ ಎಂದರೆ ಸರಿ. ಜಮೀನಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಪರಿಹಾರವನ್ನು ಪಡೆದಿದ್ದೇನೆ.

**2.** 2013 ರ ನಂತರದ ಪಹಣಿ ಪತ್ರಿಕೆಯನ್ನು ನಾನು ನೋಡಿಲ್ಲ. ಪಹಣಿಯಲ್ಲಿ ಅಡಮಾನದ ಬಗ್ಗೆ ನಮೂದಾಗಿರುವುದನ್ನು ತೆಗೆಸಲು ನಿವೇನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎಂದರೆ, ಅದು ಸ್ವಯಂ ಚಾಲಿತವಾಗಿ ಪಹಣಿಯಿಂದ ತೆಗೆಯಲಾಗುತ್ತದೆ ಎಂದು ವಾದಿ ನನಗೆ ತಿಳಿಸಿರುತ್ತಾರೆ. ವಾದಿಯು ನನಗೆ ನೋಟೀಸ್ ನೀಡಿದ ನಂತರ ವಾದಿಯ ವಿರುದ್ಧ ನಾನು ದೂರು ನೀಡಿಲ್ಲ. ವಾದಿಗೂ ನನಗೂ ಪರಿಚಯವಿಲ್ಲ. ವಾದಿ ನನ್ನ ದೂರ ಸಂಬಂಧಿ ಎಂದರೆ ಸರಿಯಲ್ಲ.

**3.** 2013 ರಲ್ಲಿ ಜಮೀನಿನಲ್ಲಿ ಬೋರ್ ಕೊರೆಸಲು ನನಗೆ ಹಣದ ಅವಶ್ಯಕತೆ ಇದೆ ಎಂದು 2011 ರಲ್ಲಿ ಬರೆದು ಕೊಟ್ಟಿರುವ ದಾಖಲೆಯನ್ನು ರದ್ದು ಮಾಡಿ ನನಗೆ 1,20,000/- ಹಣವನ್ನು ಕೊಡಿ ಎಂದು ನಾನು ಪುಟ್ಟಪರ್ತಿಯಲ್ಲಿ ಇರುವ ವಾದಿಯವರು ಮನೆಗೆ ಹೋಗಿ ವಾದಿಯನ್ನು ಕೇಳಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಮಾರು ಬಾರಿ ಈ ಬಾರಿ ಕೇಳಿದ್ದರಿಂದ ವಾದಿ ಒಪ್ಪಿಕೊಂಡಿದ್ದರು ಎಂದರೆ

ಸರಿಯಲ್ಲ. ನಾನು 2011 ರಲ್ಲಿ ಮಾಡಿರುವ ಅಡಮಾನ ಪತ್ರವನ್ನು ರದ್ದು ಮಾಡಿ ಅದೇ ದಿನ ವಾದಿಯಿಂದ 1,00,000/- ರೂ ಹಣವನ್ನು ವಾಪಸ್ಸು ಕೊಟ್ಟು ನಂತರ 1,20,000/- ಹಣವನ್ನು ವಾದಿಯಿಂದ ಪಡೆದು ದಿಃ 07.06.2013 ರಂದು ಅಡಮಾನ ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಮೊದಲನೇ ಅಡಮಾನ ಪತ್ರವನ್ನು ರದ್ದು ಮಾಡಿರುವುದು ನಿಜ, ಆದರೇ ದಿಃ 07.06.2013 ರಂದು ಅಡಮಾನ ಪತ್ರ ಬರೆದುಕೊಟ್ಟಿಲ್ಲ.

**4.** ನಿಪಿ 1 ಮತ್ತು 2 ಕ್ಕೆ ನಾನೇ ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಡಿ 1 ಮತ್ತು 2 ಕ್ಕೆ ನನ್ನ ತಂದೆ ಸಹಿ ಮಾಡಿದ್ದಾರೆ ಎಂದರೆ ದಿಃ 07.06.2013 ರಂದು ನಿಡಿ 2 ಕ್ಕೆ ಮಾತ್ರ ಸಹಿ ಮಾಡಿದ್ದಾರೆ. ನಿಪಿ 1 ರಲ್ಲಿ ಕೃಷ್ಣಪ್ಪ ಎಂಬ ಸಹಿ ಇರುವುದು ನನ್ನದು. ನಿಪಿ 1 ಕ್ಕೆ ನನ್ನ ತಂದೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 2 ಕ್ಕೂ ಕೂಡ ನನ್ನ ತಂದೆ ಜಿ ಎಲ್ ನರಸಿಂಹಯ್ಯ ಮತ್ತು ಪತ್ರ ಬರಹಗಾರ ಶಿವಪ್ಪ ರವರು ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯಿಂದ ಪಡೆದಿರುವ ಹಣವನ್ನು ವಾಪಸ್ಸು ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ದಾಖಲಿಸುವ ಕಾಲಕ್ಕೆ ವಾದಿಗೆ ನಾನು 2,64,000/-ರೂ. ಸಾಲದ ಹಣ ವಾಪಸ್ಸು ನೀಡಲು ಬಾತ್ಯಸ್ತನು ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ